
# ಬಾಹುಬಲಿಯ ಗೆಲುವು!

ಗೆದ್ದರೆ ಗೆಲ್ಲಬೇಕು ಬಾಹುಬಲಿಯಂತೆ, ಬಿಟ್ಟುಕೊಡುವುದರಿಂದ.
–ಕೆ.ವಿ. ತಿರುಮಲೇಶ್



**ಮನೆಯ** ಬಾಗಿಲಲ್ಲಿ ಎದುರುಗೊಳ್ಳುವ ಬೆಕ್ಕಿನೊಂದಿಗೆ ಕವಿ ದೃಷ್ಟಿಯುದ್ಧಕ್ಕೆ ತೊಡಗುವ ಚಿತ್ರಣ ಕೆ.ವಿ. ತಿರುಮಲೇಶರ 'ಮುಖಾಮುಖಿ' ಕವಿತೆಯಲ್ಲಿದೆ. ಬೆಕ್ಕಿನ ಕಣ್ಣುಗಳನ್ನು ಎವೆಯಿಕ್ಕದೆ ನೋಡುವ ಆಟ ಬೇಸರವೆನ್ನಿಸಿದಾಗ, ಕವಿಗೆ ಹೊಳೆಯುವುದು – ಗೆದ್ದರೆ ಗೆಲ್ಲಬೇಕು ಬಾಹುಬಲಿಯಂತೆ, ಬಿಟ್ಟುಕೊಡುವುದರ ಮೂಲಕ ಎನ್ನುವ ಅರಿವು.

ಅಣ್ಣ ಭರತ ಚಕ್ರವರ್ತಿಯೊಂದಿಗೆ ಗುದ್ದಾಟಕ್ಕೆ ಬಿದ್ದ ಬಾಹುಬಲಿ, ಹೋರಾಟದಲ್ಲಿ ಗೆದ್ದ ಮೇಲೆ ತನ್ನ ಗೆಲುವಿನ ನಿರರ್ಥಕತೆಯನ್ನು ಅರಿಯುತ್ತಾನೆ. ಬಾಹುಬಲಿಯ ಹಮ್ಮಿಗೆ ಚೋದಕವಾಗಬೇಕಾದ ಗೆಲುವು, ಅಹಂಕಾರದ ನಿರಶನಕ್ಕೆ ಹಾಗೂ ವಿರಾಗಕ್ಕೆ ಕಾರಣವಾಗುತ್ತದೆ. ಮುಂದಿನದು ಬಾಹುಬಲಿಯ ತಪಸ್ಸಿನ, ಕೇವಲಜ್ಞಾನ ಸಿದ್ಧಿಯ ಕಥೆ. ಆ ಕಥೆಯನ್ನು ತಿರುಮಲೇಶರು ಬದುಕಿನ ಅಪೂರ್ವ ದರ್ಶನದ ರೂಪದಲ್ಲಿ, ಒಂದೇ ಸಾಲಿನಲ್ಲಿ ಹಿಡಿದಿಟ್ಟಿದ್ದಾರೆ.

ಸೋತವರು ಬಿಟ್ಟುಕೊಡುವುದು ಜಗದ ರೂಢಿ. ಗೆಲುವಿನ ಉದ್ದೇಶವೇ ಗಳಿಕೆ. ಆದರೆ, 'ಮುಖಾಮುಖಿ' ಕವಿತೆಯ ಕವಿಗೆ, ಬಿಟ್ಟುಕೊಡುವುದು ಬಹು ದೊಡ್ಡ ಸುಖ ಎನ್ನಿಸಿದೆ. ತನ್ನ ಗೆಲುವನ್ನು ತೃಣಮಾತ್ರವಾಗಿ ಕಂಡ ಬಾಹುಬಲಿ ಕೈವಲ್ಯವನ್ನು ಹೊಂದಿದ. ರಾಜ್ಯಭೋಗ, ಸಿರಿವಂತಿಕೆಯ ಆಕರ್ಷಣೆಗೆ ಆಕರ್ಷಿತನಾಗಿದ್ದರೆ ಬಾಹುಬಲಿ ಕೈವಲ್ಯದಿಂದ ದೂರವಾಗುತ್ತಿದ್ದ. ಹಾಗಾಗಿಯೇ, ಬಾಹುಬಲಿಯ ಬಿಟ್ಟುಕೊಡುವಿಕೆಯಲ್ಲಿ ಇರುವ ಅಲೌಕಿಕ ಗೆಲುವಿನತ್ತ ಕವಿ ಗಮನಸೆಳೆಯುತ್ತಿದ್ದಾರೆ.

ಬಿಟ್ಟುಕೊಡುವುದು, ದಯೆಯನ್ನೂ ದಾನವನ್ನೂ ಅಹಂಕಾರದ ನಿರರ್ಥಕತೆಯನ್ನೂ ಸೂಚಿಸುತ್ತದೆ. ಎರಡೂ ಸಂದರ್ಭಗಳಲ್ಲಿ ಮನಸ್ಸಿಗೆ ನೆಮ್ಮದಿ ದೊರೆಯುತ್ತದೆ. ಬಿಟ್ಟುಕೊಡುವುದು ನಮ್ಮನ್ನು ನಾವು ಉತ್ತಮಪಡಿಸಿಕೊಳ್ಳುವ ಕ್ರಿಯೆ ಆಗಿರುವಂತೆ, ಎದುರಿನವರ ಹಿತವನ್ನು ಬಯಸುವ ಮಾರ್ಗವೂ ಹೌದು. ಕವಿರಾಜಮಾರ್ಗಕಾರನ ಪ್ರಕಾರ, ಕನ್ನಡಿಗರು 'ಉದಾರಿಗಳ್.' ಅದರರ್ಥ, ಬಿಟ್ಟುಕೊಡುವುದರಲ್ಲಿನ ಸುಖವನ್ನು ಅರಿತ ವಿವೇಕಿಗಳು.

ಬಿಟ್ಟು ಕೊಡುವುದರಲ್ಲಿನ ಸುಖ ಮತ್ತು ಘನತೆಯ ಕುರಿತು ಕನ್ನಡ ಕಾವ್ಯ ಪರಂಪರೆ ಪಂಪನಿಂದ ಇಂದಿನವರೆಗೆ ಮತ್ತೆ ಮತ್ತೆ ಪ್ರತಿಪಾದಿಸುತ್ತಲೇ ಇದೆ. ಈ ಪರಂಪರೆಯ ಸಶಕ್ತ ಕೊಂಡಿಯ ರೂಪದಲ್ಲೂ ತಿರುಮಲೇಶರ ಪ್ರತಿಪಾದನೆಯನ್ನು ಗಮನಿಸಬೇಕು.

**–ಮಹತಿ**

Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220, © All rights reserved. Reproduction in whole or in part without permission is prohibited. RNI No 17129/68